Doc-16
T-P.2

(1)

R No KRNN 12 4 - 2 - 1975

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★
58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಮುದ್ರಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರಧುರೀಣ ಎಂ. ಎಸ್. ಕೃಷ್ಣರಾವ್ (3 ಪೈಸೆ

ಭಾರತದ ಮೇಲೆ ಕ್ರಿಸ್ಟೋಲರ್ ಟೀಕೆ

ಅಲಕ್ಷಿಸಬೇಡಿ

ಆಯುರ್ವೇದ ಮತ್ತಿತರ ಸಾಂಪ್ರದಾಯಕ ಔಷಧಿ ಪದ್ಧತಿಯ ವ್ಯಾಸಂಗವನ್ನು ಅಲಕ್ಷಿಸಿಬಾರದೆಂದು ಪಾಂಡಿಚೆರಿಯಲ್ಲಿ 48 ನೆಯ ಆಯುರ್ವೇದೀಯ ಕಾಂಗ್ರೆಸ್‌ನ್ನು ಉದ್ಘಾಟಿಸುತ್ತಾ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ತಿಳಿಸಿದರು.

★

ಉಚಿತ ಶಿಕ್ಷಣಕ್ಕೆ ಕರೆ

ಕಂಚಿ ಕಾಮಕೋಟಿ ಪೀಠದ ಕಿರಿಯ ಸ್ವಾಮಿಯವರು ರಾಜಮಹೇಂದ್ರಿಯಲ್ಲಿ ಪತ್ರಿಕೆಯವರೊಡನೆ ಮಾತನಾಡುತ್ತಾ, ಉಪಾಧ್ಯಾಯರು ಬಡ ವಿದ್ಯಾರ್ಥಿಗಳಿಗೆ ವಾರಕ್ಕೆ ಮೂರು ದಿನಗಳಾದರೂ ಉಚಿತವಾಗಿ ಪಾಠ ಹೇಳಿಕೊಡಬೇಕೆಂದು ತಿಳಿಸಿದರು

★

ಶಿಕ್ಷಣ ಕ್ಷೇತ್ರಕ್ಕೆ ಶಾಪ

ಶಾಲೆ ಪಠ್ಯ ಪುಸ್ತಕಗಳ ರಾಷ್ಟ್ರೀಕರಣ ಶಿಕ್ಷಣ ಕ್ಷೇತ್ರಕ್ಕೆ ಶಾಪ ಆಗಿರುವುದೆಂದು ಮಂಗಳೂರಿನಲ್ಲಿ ಉಪಾಧ್ಯಾಯರ ಸಮ್ಮೇಳನ ಉದ್ಘಾಟಿಸುತ್ತಾ ಖ್ಯಾತ ಕನ್ನಡ ಸಾಹಿತಿ ಡಾ|| ಶಿವರಾಂ ಕಾರಂತರು ಹೇಳಿದರು.

★

ದೇ ಜಗೌ ಆಶಯ

ಕರ್ನಾಟಕದಲ್ಲಿ ನೆರೆ ರಾಜ್ಯಗಳಲ್ಲಿರುವ ದಕ್ಕಿಂತ ವಿಶ್ವವಿದ್ಯಾನಿಲಯಗಳು ಕಡಿಮೆ ಆಗಿರುವವೆಂದು, ಇಲ್ಲಿ ಹೆಚ್ಚಾಗಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ|| ಜವರೇಗೌಡರು, ತಮ್ಮನ್ನು ಅಭಿನಂದಿಸಿದ ಸಂದರ್ಭದಲ್ಲಿ ದಾವಣಗೆರೆಯಲ್ಲಿ ತಿಳಿಸಿದರು.

★

ಚೀಣಾಕ್ಕೆ ರಾಯಭಾರಿ ಆಗಿ ಹೋಗಲು ಮಾಜಿ ಅಧ್ಯಕ್ಷ ನಿಕ್ಸನ್‌ರು ಇಚ್ಛಿಸಿರುವರು

ಜನತಾ ಬಜಾರ್ ಪ್ರಾರಂಭ

ಮೈಸೂರಿನಲ್ಲಿ ನಿನ್ನೆ ಸಂಜೆ 2 ನೇ ಜನತಾ ಬಜಾರ್‌ನ್ನು ಉದ್ಘಾಟಿಸುತ್ತಾ, ಭಾರತ ಸರ್ಕಾರದ ಮಂತ್ರಿ ಶ್ರೀ ಟಿ ಎ ಪೈರವರು ಮಾತನಾಡುತ್ತಾ, ಬಳಕೆದಾರ ಸಹಕಾರ ಸಂಘಗಳು 5 ನೇ ಯೋಜನೆ ಕಡೆಯ ವರ್ಷದಲ್ಲಿ ಗುರಿ 600 ಕೋಟಿಯ ಹತ್ತು ಭಾರಿ ಚಿಲ್ಲರೆ ವ್ಯಾಪಾರ ನಡೆಸಲಿವೆಯೆಂದು ಹೇಳಿದರು ಇದರಿಂದ ಸಾರ್ವಜನಿಕರಿಗೆ ಸರಿಯಾದ ಹಂಚಿಕೆ, ಬೆಲೆ ಸ್ಥಿಮಿತವಾಗುವುದು ಎಂದರು

ಲೋಕಸಭೆ ಸದಸ್ಯ ಶ್ರೀ ವಿ ಬಿ ತ ರೋಡೆಕರ್‌ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಟಿ ವಿ. ಶ್ರೀನಿವಾಸರಾವ್‌ರವರು ಸ್ವಾಗತ ಭಾಷಣ ಮಾಡಿದರು ಸ್ಪೋರ್ಸ್ ಅಧ್ಯಕ್ಷ ಶ್ರೀ ಗೋಪಾಲರಾಜ ಅರಸ್‌ರವರು ವಂದನಾರ್ಪಣೆ ಮಾಡಿದರು. ಶ್ರೀ ಹೆಚ್. ಕೆಂಪೇಗೌಡರು ವಂದನಾರ್ಪಣೆ ಮಾಡಿದರು.

●

ಸಕ್ಕರೆ ಬೆಲೆ ಕೆಜಿಯೊಂದಕ್ಕೆ ಮೂವತ್ತ ಪೈಸೆಗಳಷ್ಟು ಇಳಿದಿದೆ ಎಂದು ಬೊಂಬಾಯಿ ವಾರ್ತೆ ವಿಕಾರುಕಟ್ಟೆಗೆ ಹೆಚ್ಚು ಸಕ್ಕರೆ ಬಿಟ್ಟಿರುವುದು ಇದಕ್ಕೆ ಕಾರಣ

●

ಆಂಧ್ರ ಪ್ರದೇಶದಲ್ಲಿ ಸಧ್ಯಕ್ಕೆ ಕುದುರೆ ಜೂಜು ನಿಲ್ಲಿಸಲು ಯಾವ ಯೋಜನೆ ಇಲ್ಲವೆಂದು ಶಾಸನ ಸಭೆಯಲ್ಲಿ ತಿಳಿಸಲಾಯಿತು

●

ದೆಹಲಿಯಲ್ಲಿ ಪರಿಸ್ಥಿತಿ ಈಗ ಶಾಂತವಾಗಿದೆ ಘರ್ಷಣೆಯಲ್ಲಿ ಸತ್ತವರ ಸಂಖ್ಯೆ ಹತ್ತಕ್ಕೇರಿದೆ

●

ಪೆಟ್ರೋಲು ಪದಾರ್ಥಗಳ ಬೆಲೆಯನ್ನು ಮುಂದಿನ ತಿಂಗಳು ಸರ್ಕಾರ ಏರಿಸಲಿದೆಯೆಂದು ನವ ದೆಹಲಿ ವಾರ್ತೆ.

ನೇಪಾಳ ರಾಜರ ಕಿರೀಟಧಾರಣಾ ಮಹೋತ್ಸವ

ಖಟ್ಮಂಡು— ಫೆಬ್ರವರಿ 24 ರಂದು ನಡೆಯುವ ನೇಪಾಳ ರಾಜರ ಕಿರೀಟ ಧಾರಣಾ ಮಹೋತ್ಸವದಲ್ಲಿ ಅವರು ಎರಡು ಮಿಲಿಯ ಡಾಲರು ಮೌಲ್ಯದ ರತ್ನಖಚಿತವಾದ ಮತ್ತು ತುರಾಯಿ ಇರುವ ಕಿರೀಟವನ್ನು ಧರಿಸುವರು – ಅನೇಕ ದೇಶಗಳ ರಾಜರೂ, ಅಧ್ಯಕ್ಷರೂ, ಪ್ರಧಾನಿಯರೂ, ರಾಯಭಾರಿಗಳೂ ಈ ಮಹೋತ್ಸವವನ್ನು ವೀಕ್ಷಿಸುವವರ ಜೊತೆಗೆ, ಸಾಮಾನ್ಯ ಕೋಟಿ ಜನರಾಗಿ ಒಂದು ಹಬ್ಬ ಕರು ಇರುತ್ತವೆ.

ಭಾರತದ ಬಗ್ಗೆ ಹೇಳಿರುವುದು

ವಾಷಿಂಗ್ಟನ್— ಭಾರತದ ಆಹಾರ ಅಭಾವವು ಅದರ ಜನಸಂಖ್ಯೆಯಿಂದಲ್ಲ ; ಆದರೆ ಭಾರತದ ಸಮಾಜವಾದಕ್ಕೆ ಮತ್ತು ಭಾರತದ ಅಡಳಿತದ ಅವಿವೇಕವು ಅವರ ಅಹಂಕಾರಕ್ಕೆ ಸರಿಸಮಾನವಾಗಿರುವುದರಿಂದ, ಎಂದು ನ್ಯೂಯಾರ್ಕ್ ವಿಶ್ವವಿದ್ಯಾಲಯದ ಪ್ರೊ || ಇರ್ವಿಂಗ್ ಕ್ರಿಸ್ಟೋಲರ್ ಒಂದು ಪತ್ರಿಕೆಯಲ್ಲಿ ಬರೆದಿರುವರು

ಪತ್ರಿಕೆಯ ತಾತ್ಪರ್ಯ

ಬಾನ್ (ಡಾಡ್)– ಪಶ್ಚಿಮ ಜರ್ಮನಿಯ ಹಲವು ದೈನಿಕ ವಾರ್ತಾ ಪತ್ರಿಕೆಗಳಿಗೆ ಉಳಿವಿನ ಪ್ರಶ್ನೆ ದೊಡ್ಡ ಸಮಸ್ಯೆಯಾಗಿಬಿಟ್ಟಿವೆ ; ಹೆಚ್ಚುತ್ತಿರುವ ವೆಚ್ಚ ಮತ್ತು ವಾಚಕರು ಬದಲಾಯಿಸುತ್ತಿರುವ ಓದುವ ಕ್ರಮ ಇದಕ್ಕೆ ಕಾರಣವಾಗಿದೆ ; ಈ ವರ್ಷಾಂತ್ಯದಲ್ಲಿ ಕೆಲವು ಜರ್ಮನ್ ನಗರಗಳಲ್ಲಿ ಒಂದೇ ಒಂದು ದೈನಿಕವಿರಬಹುದೆಂದು ಅಂದಾಜು ಮಾಡುತ್ತಾರೆ – ಹಿಂದೆ ಇಂತಹ ದುರವಸ್ಥೆ ಚಿಕ್ಕ ಪತ್ರಿಕೆಗಳಿಗೆ ಮಾತ್ರ ಇತ್ತು ; ಈಗ ದೊಡ್ಡ ಪತ್ರಿಕೆಗಳಿಗೂ ತಟ್ಟಿದೆ.

ಪಾಖಲೆ

ಬ್ರಿಟನ್ನಿನ 44 ವಯಸ್ಸಿನ ಡೊರೋಥಿ ಬರ್ಟನ್ ಈರುಳ್ಳಿ ಬಿಡಿಸುವದರಲ್ಲಿ ಹೊಸ ದಾಖಲೆ ಸ್ಥಾಪಿಸಿದ್ದಾಳೆ – ಕಣ್ಣೀರು ಹರಿಸಿಕೊಂಡು ಅವರು 28 ಕಿ ಲೋ ಈರುಳ್ಳಿಯನ್ನು ಬಿಡಿಸಿದಳು ಒಮ್ಮೆಗೆ

ಜಯಪ್ರಕಾಶರ ಹೇಳಿಕೆ

ಹದಿನೆಂಟು ದಿನಗಳ ಗುಜರಾತು, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶ ಇಲ್ಲಿ ಪ್ರವಾಸ ಮಾಡಿದನಂತರ ಜಯಪ್ರಕಾಶ ನಾರಾಯಣರು ಪಾಟ್ನಾಕ್ಕೆ ಆಗಮಿಸಿದರು ಪಾಟ್ನಾಕ್ಕೆ ಹೊರಡುವ ಮುನ್ನ ಗೋರಖಪುರದಲ್ಲಿ ಒಂದು ಭಾರಿ ಸಭೆಯಲ್ಲಿ ಅವರು ಭಾಷಣ ಮಾಡಿ, ಪಾಟ್ನಾದಲ್ಲಿ ತನ್ನನ್ನು ದಸ್ತಗಿರಿ ಮಾಡಿದರೆ ತೀವ್ರ ಪರಿಣಾಮ ಉಂಟಾದೀತೆಂದು ಪ್ರಧಾನರಿಗೆ ಎಚ್ಚರಿಕೆ ನೀಡಿದರು.

★

ಆಂಧ್ರ ವಿಧಾನಸಭೆಯ ಮುಂದಿನ ಅಧಿವೇಶನದಲ್ಲಿ ಲೋಕಪಾಲ್ ಮತ್ತು ಲೋಕಾಯುಕ್ತ ಮಸೂದೆಯನ್ನು ಪರ್ಯಾಲೋಚಿಸುವ ಸಂಭವವಿದೆ.

★

ಮೈಸೂರಿನಲ್ಲಿ ವಿದ್ಯಾರ್ಥಿ ಸಮ್ಮೇಳನ ಉದ್ಘಾಟಿಸುತ್ತಾ, ಮಂತ್ರಿ ಶ್ರೀ ಗುಂಡೂರಾಯರು, ತಮ್ಮ ಕಚೇರಿಯಲ್ಲಿ ವಿದ್ಯಾರ್ಥಿಗಳ ಸಮಸ್ಯೆ ಹಾಗೂ ಕಲ್ಯಾಣ ವಿಷಯ ಪರ್ಯಾಲೋಚಿಸಲು ವಿದ್ಯಾರ್ಥಿ ಕಲ್ಯಾಣ ಇಲಾಖೆ ಸ್ಥಾಪಿಸಲು ಯೋಚಿಸಿರುವುದಾಗಿ ತಿಳಿಸಿದರು.

ದರ್ಜಿ ವೈದ್ಯ

ಪಶ್ಚಿಮ ಜರ್ಮನಿಯ ಫ್ಲೆನ್ಸಬರ್ಗ್‌ನಲ್ಲಿ ದರ್ಜಿಯೊಬ್ಬನ ಮೇಲೆ ಹೂಡಿದ್ದ ನೊಖದ್ದಮೆ ಈತೂಹಲಕರ ಅಂಶಗಳನ್ನು ಹೊರಗೆಡಹಿದೆ. ಈ ದರ್ಜಿ ವೈದ್ಯಕೀಯ ವೃತ್ತಿ ಹಿಡಿದ ; ಅದರಲ್ಲಿ ಅವನ ಆಯ್ಕೆ ಶಸ್ತ್ರಚಿಕಿತ್ಸೆ ; ಜನರ ಬಟ್ಟೆ ಹೊಲಿದು ರಿಪೇರಿ ಮಾಡುವ ತನಗೆ, ಶಸ್ತ್ರಚಿಕಿತ್ಸೆಯನ್ನು ಅವಂಗೆ ಮಾಡುವುದು ಏಕೆ ಸಾಧ್ಯವಿಲ್ಲ ಎಂಬುದೇ ಅವನ ವಾದ ; ಅವನ ವೈದ್ಯಕ್ಕೆ ಗುರಿಯಾಗಿ ಕೆಲವರು ಅಂಗವಿಕಲರಾದರು – ಪೋಲೀಸರು ಈ ಪ್ರಸಂಗದ ತನಿಖೆ ನಡೆಸಿದಾಗ ದೇಶದಲ್ಲಿ ಇಂತಹ ವೈದ್ಯರುಗಳ ಕಾಟ ಹೆಚ್ಚಾಗಿರುವುದು ಕಂಡುಬಂದಿತು.

ದಿವ್ಯವಾಣಿ

ಯಾರಿಗೆ ಸತ್ಯ ಮಾತಾಡುತ್ತದೋ, ಅವರು ಸಾಕಷ್ಟು ನಾಗ್ಗೆಲಖರಿ ಹೊಂದಿದ್ದಾರೆ. — ಪಬ್ಲಿಲಿಯಸ್ ಸಿರಸ್

ವಚನಾಮೃತ

ಹರಿಯ ನುಂಗಿತ್ತು ಮಾಯೆ, ಅಜನ ನುಂಗಿತ್ತು ಮಾಯೆ
ಇಂದ್ರನ ನುಂಗಿತ್ತು ಮಾಯೆ, ಚಂದ್ರನ ನುಂಗಿತ್ತು ಮಾಯೆ
ಬಲ್ಲೆನೆಂಬುವರ ಬಲಗೈಯನೆ ನುಂಗಿತ್ತು ಮಾಯೆ
ಅರಿಯೆನೆಂಬ ಅಜ್ಞಾನಿಗಳ ಅರೆ ನಿಮಿಷದಲಿ ನುಂಗಿತ್ತು ಮಾಯೆ
ಈರೇಳು ಭುವನಗಳ ಆರಡಿ ಗೊಂಡಿತ್ತು ಮಾಯೆ
ಚೆನ್ನಮಲ್ಲಿಕಾರ್ಜುನಯ್ಯ ಎನ್ನ ಮಾಯೆಯ ಮಾಣಿಸಾ ಕರುಣಿ.

— ಅಕ್ಕ ಮಹಾದೇ (ವಿಶ್ವಕಲ್ಯಾಣ)

ವುಡ್‌ಲಾಂಡ್ಸ್ 31 I 75 ರಿಂದ

ಅವೋಘ 2 ನೇ ವಾರ

ಮಿನರ್ ರೋಮಿಯೋ

ಅ

ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಪಾತ್ರ– ಶಶಿಕಪೂರ್, ರಿಂಕು ಜೈಸಾಲ್, ದಿನ ೫ ಪ್ರದರ್ಶನಗಳು

ಅಪೆರಾ 31 I 75 ರಿಂದ

ಸಹಸ್ರ ಶಿರಚ್ಛೇದ **ಅಪೂರ್ವ ಚಿಂತಾಮಣಿ**

ಅನೋಘ ಕನ್ನಡ ಚಿತ್ರ

ದಿನ 3 ಪ್ರದರ್ಶನಗಳು

Contribute Liberally
to the National Defence Fund

SHAKTI
SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

ಭಾರತದಲ್ಲಿ ೋವಧೆ
ಪೂರ್ಣ ನಿಶೇಧವಾಗಲಿ



Protect the Cow

Help The Gorakshana

—Humanitarian Propoganda Monthly....

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore